
## 180 ವರ್ಷದ ಹಳೆ ಮನೆ



ಈ ಚಿತ್ರದಲ್ಲಿ ಕಾಣುವ ಮನೆ 180 ವರ್ಷದ ಇತಿಹಾಸ ಹಾಗೂ ಹಳೆಯ ವೈಭವ ಹೊಂದಿದೆ. ಉತ್ತರ ಕರ್ನಾಟಕದ ವಾಡೆಯಂತಹ ಮನೆ. ಮನೆಯ ಕಂಬಗಳು ಅದ್ಭುತ ಕಲಾಕೃತಿಗಳಿಂದ ಆಕರ್ಷಕವಾಗಿದೆ. ಶೃಂಗೇರಿಯ ಗಣಪತಿಕಟ್ಟೆಯಿಂದ ಒಳಹೋದರೆ ಬೇರುಕುಡಿಗೆ ಎಂಬ ಪುಟ್ಟಗ್ರಾಮವಿದೆ. ಮಲೆನಾಡು, ಕಂಗು, ಬಾಳೆ, ಏಲಕ್ಕಿ, ಕಾಫಿಗಿಡ, ಪೇರಲೆ, ಗೇರು, ಸಪೋಟ ಹಣ್ಣುಗಳ ಗಿಡಗಳಿಂದ ಹಚ್ಚ ಹಸುರಿನಿಂದ ಕೂಡಿದ ತೋಟ. ಅಲ್ಲಿ ನಾಗೇಶರಾಯರು ವಾಸವಾಗಿರುವ ಸುಂದರ ಅನಾದಿ ಕಾಲದ ವೈಭವದ ಗೃಹ. ಒಂದು ಕಾಲದಲ್ಲಿ 15–20 ಜನ ವಾಸವಿದ್ದರು. ಈ ಮನೆಯಲ್ಲಿ ಒಂಭತ್ತು ದಿವಸದ ನವರಾತ್ರಿ ಪೂಜೆ ಸಮಾರಾಧನೆ ಪ್ರತಿವರ್ಷವೂ ತಪ್ಪದೆ ಆಚರಣೆಯಲ್ಲಿದೆ.

**■ ನಾಗರತ್ನ ಎಂ.ಜಿ., ಬೆಂಗಳೂರು**



## ಹುತಾತ್ಮರ ಸ್ಮಾರಕ ಸ್ತಂಭ

**1942**ರಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ದಾವಣಗೆರೆಯ ಹಳ್ಳೂರು ನಾಗಪ್ಪ, ಅಕ್ಕಸಾಲಿ ವಿರೂಪಾಕ್ಷಪ್ಪ, ಬಿದರಕುಂದಿ ನಿಂಗಪ್ಪ, ಹಮಾಲಿ ತಿಮ್ಮಣ್ಣ, ಹದಡಿ ನಿಂಗಪ್ಪ ಹಾಗೂ ಮಾಗಾನಹಳ್ಳಿ ಹನುಮಂತಪ್ಪ ಅವರು ಬ್ರಿಟಿಷರು ನಡೆಸಿದ ಗೋಲಿಬಾರಿಗೆ ಎದೆಯೊಡ್ಡಿ ಹುತಾತ್ಮರಾದರು. ದಾವಣಗೆರೆಯ ನೆಲಕ್ಕೆ ತಮ್ಮ ಋಣ ತೀರಿಸಿದರು! ಅವರ ಸ್ಮರಣಾರ್ಥವಾಗಿ 'ರಾಷ್ಟ್ರ ಲಾಂಛನ'ದಡಿ ಸ್ಮಾರಕ ನಿರ್ಮಿಸಲಾಗಿದ್ದು, ಈ ಸ್ಮಾರಕವನ್ನು ಈಗಲೂ ದಾವಣಗೆರೆ ಕಾರ್ಪೊರೇಷನ್ ಕಚೇರಿ ಕಟ್ಟಡದ ಆವರಣದಲ್ಲಿ ಕಾಣಬಹುದು.

**■ ಜಿ. ರಾಜಣ್ಣ, ದಾವಣಗೆರೆ**

## ಬಾಳು ಬಂಗಾರ

ಗೃಹ ಪ್ರವೇಶ, ಮದುವೆ ಮುಂಜಿಗಳ ಶುಭ ಕಾರ್ಯಗಳಲ್ಲಿ ಬೀಸುವ ಕಲ್ಲಿಗೆ ಉಡಕ್ಕಿ ಸಾಮಾನುಗಳನ್ನಿಟ್ಟು ಸುಣ್ಣ ಮತ್ತು ಹುರವಂಜಿಗಳ ಬಣ್ಣ ಬಳಿದು ಆರಾಧಿಸುವ, ಬೀಸುವ ಕಲ್ಲಿನ ಬಾಯಿಗೆ ಹಳದಿವಸ್ತ್ರದಲ್ಲಿ ನಿಂಬೆಹಣ್ಣು ಕಟ್ಟಿ ಪೂಜೆ ಮಾಡುವ ಸಂಪ್ರದಾಯ ಉತ್ತರ ಕರ್ನಾಟಕದಲ್ಲಿದೆ. ಹಿಂದಿನ ಕಾಲದಲ್ಲಿ ಜೋಳ, ಗೋಧಿ ಮುಂತಾದ ದವಸ ಧಾನ್ಯಗಳನ್ನು ಬ್ರಾಹ್ಮೀ ಸಮಯದಲ್ಲಿ ಬೀಸುವ ಕಲ್ಲಿನಲ್ಲಿ ಬೀಸುತ್ತ ಜಾನಪದ ಗೀತೆ ಹಾಡುವ ಪದ್ಧತಿ ಇತ್ತು. ಕಲ್ಲಿನಲ್ಲಿ ಧಾನ್ಯ ಹಿಟ್ಟಾಗಿ ರೊಟ್ಟಿ, ಚಪಾತಿ ಮಾಡಲು ಅನುಕೂಲವಾಗುವಂತೆ ಸಾಂಸಾರಿಕ ಜೀವನದಲ್ಲಿ ಕಷ್ಟ ನಷ್ಟ ಅರಗಿ ಬಾಳು ಬಂಗಾರವಾಗಲೆಂಬುದೆ ಇದರ ಸಂಕೇತ.

**■ ಮಂದಾಕಿನಿ ಬಿರಾದಾರ, ವಿಜಯಪುರ**

